ಅಧ್ಯಕ್ಷರು :—ಈಗ ಸದನ ಎದ್ದು ಮಂತ್ರಿ ಒಂದು ಗಂಟೆಯ ನಂತರ ಮತ್ತೆ ಸಮಾವೇಶ ಗೊಳ್ಳುವುದು.

(ಮಧ್ಯಾಹ್ನ ೨—೧೭ಕ್ಕೆ ಮುಕ್ತಾಯವಾಗಿ ಮತ್ತೆ ೩—೧೭ಕ್ಕೆ ಸೇರಲು ನಿಶ್ಚಯಿಸಿತು.)

ಸದನವು ೩—೩೦ಕ್ಕೆ ಸಮಾವೇಶಗೊಂಡಿತು

ಅಧ್ಯಕ್ಷರು.—ಶ್ರೀ ಎಸ್. ಎಂ. ಕೃಷ್ಣ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಮೌಖಿಕ ಉತ್ತರಗಳು

ಜಿಲ್ಲಾ ಪರಿಷತ್ತುಗಳಿಂದ ಅಧಿಕಾರಗಳನ್ನು ಹಿಂತೆಗೆದುಕೊಳ್ಳುವುದು

೭೯೯ ಶ್ರೀ ಕೆ. ಲಕ್ಕಪ್ಪ (ಕುಣಿಗಲ್).—ಮಾನ್ಯ ಗ್ರಾಮಾಭಿವೃದ್ಧಿ, ಪಂಚಾಯತ್ ರಾಜ್, ವಾರ್ತಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಸರ್ಕಾರವು ಜಿಲ್ಲಾ ಪರಿಷತ್ತುಗಳಲ್ಲಿ ಹಣವಿಲ್ಲವೆಂಬ ಕಾರಣಕ್ಕಾಗಿ ಅವುಗಳಿಗೆ ವಹಿಸಿದ ಇಲಾಖೆಗಳನ್ನು ಹಿಂತೆಗೆದುಕೊಳ್ಳುವ ಉದ್ದೇಶವಿದೆಯೆ ?

ಆ) ಹಾಗಿದ್ದಲ್ಲಿ ಹಿಂತೆಗೆದುಕೊಳ್ಳುವ ಇಲಾಖೆಗಳು ಯಾವುವು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಸಚಿವರು ನನ್ನ ಪ್ರಶ್ನೆಗೆ 'ಇಲ್ಲ' ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಅದು ಉತ್ತರವಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಸ್ವಾಮಿ ತಮ್ಮ ಪ್ರಶ್ನೆಗೆ ಅದೇ ಉತ್ತರ.

ಶ್ರೀ ಕೆ. ಲಕ್ಕಪ್ಪ —ಉತ್ತರದಲ್ಲಿ . ಉದ್ಭವಿಸುವುದಿಲ್ಲ ' ಎಂದು ಹೇಳುವುದು ಉತ್ತರವಲ್ಲ.

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಸದಸ್ಯರ ಪ್ರಶ್ನೆಗೆ ತಕ್ಕಂಥ ಉತ್ತರ ಕೊಟ್ಟಿದ್ದೇನೆ.

ಶ್ರೀ ಕೆ. ಲಕ್ಕಪ್ಪ.—ಮಾನ್ಯ ಸಚಿವರು ನನ್ನ ಪ್ರಶ್ನೆಯನ್ನು ಅರ್ಥ ಮಾಡಿಕೊಂಡಿಲ್ಲ ಎಂದು ಕಾಣುತ್ತದೆ.

ಶ್ರೀ ಎಂ. ವೈ. ಘೋರ್ಪಡೆ.—ಜಿಲ್ಲಾಪರಿಷತ್ತಿನಿಂದ ಕೆಲವು ಇಲಾಖೆಗಳನ್ನು ಪಾಪಸ್ಸು ಪಡೆಯತಕ್ಕಂಥ ವಿಚಾರವು ಸರಕಾರಕ್ಕೆ ಇದೆಯೇ ? ಎಂದು ಕೇಳಿದ್ದಾರೆ. ಅದಕ್ಕೆ ಇಲ್ಲ ಎಂದು ಉತ್ತರದಲ್ಲಿ ಹೇಳಿದ್ದೇನೆ. ಆದರೂ ಮಾನ್ಯ ಸದಸ್ಯರು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿದ್ದರೂ ಅವರು ಇನ್ನೂ ಹೆಚ್ಚು ಉತ್ತರವನ್ನು ನನ್ನಮತಿಯಿಂದ ಅಪೇಕ್ಷೆ ಮಾಡಿರುವುದರಿಂದ ಕೆಲವು ಮಾತುಗಳನ್ನು ಹೇಳುತ್ತಾ ಇದ್ದೇನೆ. ಇದೊಂದು ಸಿದ್ಧಾಂತದ ಪ್ರಶ್ನೆ ಇದೆ. ಆ ಮಟ್ಟದಲ್ಲಿ ಯಾವ ಯಾವ ಕೆಲಸಗಳು ಆಗಬೇಕು, ಯಾವ ಯಾವ ಕೆಲಸಗಳನ್ನು ಅವರಿಗೆ ಕೊಡಬೇಕು ಆದನ್ನು ಕೊಟ್ಟಿದ್ದೇನೆ. ಒಂದು ವೇಳೆ ಜಿಲ್ಲಾ ಪರಿಷತ್ತಿನವರು ಕೆಲಸ ಮಾಡುವುದರಲ್ಲಿ ದೋಷ ಇದ್ದರೆ ಅದನ್ನು ಸೂಕ್ತ ರೀತಿಯಲ್ಲಿ ಸರಿಪಡಿಸುವಂಥ ಶಕ್ತಿ ಸಾಮರ್ಥ್ಯ ಸರಕಾರಕ್ಕೆ ಇದೆ. ಆ ದಿಸೆಯಲ್ಲಿ ತಕ್ಷಣ ಯಾವ ಮಟ್ಟದಲ್ಲಿ ಯಾವ ಕೆಲಸ ನಡೆಯಬೇಕು ಅದನ್ನು ಭದ್ರವಾಗಿ ಕಾಪಾಡಿಕೊಂಡು ಹೋಗುವ ಕೆಲಸ ಸರಕಾರದ್ದು. ಯಾವುದೇ ಕೆಲಸಗಳು ಜನರ ಸಮ್ಮುಖದಲ್ಲಿ ನಡೆದರೆ ಅಂಥ ಕೆಲಸಗಳು ಇನ್ನಷ್ಟು ದಕ್ಷತೆಯಿಂದ ನಡೆಯಲ್ಪಡುತ್ತವೆ, ಕಾರ್ಯಗತವಾಗುತ್ತವೆ ಎಂಬ ದೃಷ್ಟಿಯಿಂದ ನಾವು ಇದರಲ್ಲಿ ಏನಾದರೂ ದೋಷ ಬಂದ ತಕ್ಷಣ ಆದರ ಪೀಲೆ ಶೀಘ್ರ ಕ್ರಮ ತೆಗೆದುಕೊಳ್ಳುವುದು ಸರಿಯಲ್ಲ. ಇದು ಆ ಸಿದ್ಧಾಂತದ ಧೋರಣೆಯೂ ಅಲ್ಲ. ಪಂಚಾಯಿತ್ ರಾಜ್ಯ ಸಂಸ್ಥೆಗಳು ಬರುವುದಕ್ಕಿಂತ ಮುಂಚೆ ಹಳ್ಳಿಗಳ ಮಟ್ಟದಲ್ಲಿ ಒಂದು ಕಣ್ಣು ಇತ್ತು. ಅಲ್ಲಿಯ ಎಂ. ಎಲ್. ಎ. ಯವರು ಮಾತ್ರ ತಮ್ಮ ಕ್ಷೇತ್ರದ ಪ್ರತಿಯೊಂದು ಕೆಲಸವನ್ನು ನೋಡಿಕೊಳ್ಳುವಂಥ ಪ್ರಮೇಯ

ಇತ್ತು. ಸಣ್ಣ ಭಾವಿಯಾಗಲೀ, ಒಂದು ರಸ್ತೆಯ ಕೆಲಸವೇ ಆಗಿರಲಿ ಅದನ್ನು ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿ ಮಾಡಿ ಮಾಡಿಸಿಕೊಳ್ಳುವಂಥ ಒಂದು ಕೆಲಸವು ಅವರಿಂದಲೇ ಆಗಬೇಕಾಗಿತ್ತು. ಈ ಪಂಚಾಯತ್ ರಾಜ್ಯ ಸಂಸ್ಥೆಯಿಂದಾಗಿ ಎರಡು ಕಣ್ಣುಗಳು ಬಂದಂತಾಗಿದೆ. ಇದರಿಂದಾಗಿ ಮಾಡಲಿದ್ದಂಥ ಕಣ್ಣಿಗೆ ಯಾವ ಧಕ್ಕೆಯೂ ಬಂದಿಲ್ಲ. ಒಂದು ವೇಳೆ ಎರಡನೆಯ ಕಣ್ಣಿನಲ್ಲಿ ದೋಷಗಳು ಏನಾದರೂ ಇದ್ದರೆ' ಪೊರೆ ಬಂದಿದ್ದರೆ ಅದನ್ನು ಖಂಡಿತವಾಗಿಯೂ ತೆಗೆಯುವ ಅಂದರೆ ಶಸ್ತ್ರಚಿಕಿತ್ಸೆ ಮಾಡುವ ಕೆಲಸಕ್ಕೆ ಸರಕಾರದವರು. ಹಿಂಜರಿಯುವುದಿಲ್ಲ ಎಂದು ಹೇಳಬಯಸುತ್ತೇನೆ. ಆದರೆ ಕಣ್ಣನ್ನೇ ಕಿತ್ತು ಹಾಕುವ ಕೆಲಸಕ್ಕೆ ಹೋಗುವುದು ಬೇಡ.

ಶ್ರೀ ಕೆ. ಲಕ್ಕಪ್ಪ.—ಅಧ್ಯಕ್ಷರೆ, ಜಿಲ್ಲಾಪರಿಷತ್‌ಗಳ ತತ್ವಗಳು, ನೀತಿಗಳು ಏನಿವೆ, ಎಂದರೆ ಜನರಿಗೆ ಅಧಿಕಾರ ಕೊಡಬೇಕೆಂದು ಇದೆ. ಆದರೆ ಅದರ ಒಂದು ಕಾನ್‌ಸೆಪ್ಟ್‌ನ ಮಿಸಾರಿ ಜಿಲ್ಲಾಪರಿಷತ್ ನವರು ಈ ರಾಜ್ಯದಲ್ಲಿ ಈಗ ಕೆಲಸ ಮಾಡುತ್ತಿರುವುದು ತಪ್ಪಗೆಲ್ಲರಿಗೂ ಗೊತ್ತಿದೆ, ಇದರ ಜೊತೆಗೆ decentylisation of power and its objectives have not been achieved so far in our experience. The zilla parishads are having glamorous postings. You have given a Minister's status to a President and a Deputy Minister's status to the Vice President in the zilla parishads You know the involvement of financial constraints of this anormous expenditure being made. You have also given reply in another question that huge amounts of money as T. A and D. A. is being given as a consequence of giving that status. They are allowed even denigrating the legislatrors in a wide range of their constit-encies. Zilla parishad members have been elected in a smaller area but their status is of Ministers of State. A Member of Parliament when he goes to Delhi, he does not get a car at the Airport but the President and the Vice President, when they go to Delhi, they get a car at the Airport. It is a gubernatorial post. They have drawn enoromous T. A. and D. A. and they are placed in Ashoka Hotel. Even the Corporation/ Municipal Presidents are also elected representative but they are not given that status. The concept of Jay Prakash Narayan was not give these gubernatorial postings. powers and money. He said, the people should enjoy the power and do the work. Unfortunately, the paucity of funds and the enormous expenditure involved in this panchayatiraj system, no zilla parishads are functioning effectively. No pacca roads have been formed and no irrigation works have been taken up. Under these circumstances, there is no use of having a second chamber. I am not asking that. Therefore, in view of these things...

ಶ್ರೀ ಪಿ. ಬೈರೇಗೌಡ.—ನಮ್ಮ ಸ್ನೇಹಿತರಿಗೆ ಈ ಪಂಚಾಯತಿ ರಾಜ್ ಡಿಮ್ಯಾಂಡ್ ಬಂದಾಗ ಒಂದು ಗಂಟೆಗಿಂತ ಎರಡು ಗಂಟೆ ಮಾತನಾಡುವುದಕ್ಕೆ ಅವರಿಗೆ ಅವಕಾಶವನ್ನು ಕೊಡಿ ಅಧ್ಯಕ್ಷರೇ ಬಹಳ ಚೆನ್ನಾಗಿ ಮಾತನಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್.—ನಾವೆಲ್ಲರೂ ಕನ್ನಡವನ್ನು ಬಯಸುತ್ತೇವೆ.

SRI K. LAKKAPPA —In view of these things, will the Government consider constitution of another Review Committee on the functioning of these institutions so that a Workable solution is found out and also see that some of the Department are taken away from the Purview of the zilla parishads ?

ಶ್ರೀ ಎಂ. ಪಿ. ವೆಂಕಟೇಶ್.—ಕನ್ನಡದಲ್ಲಿ ಮಾತನಾಡಿದರೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್.—ಲೋಕಸಭೆಯಲ್ಲಿಯೂ ಹೀಗೆ ಮಾತನಾಡುತ್ತೀರಾ ?

ಶ್ರೀ ಎಂ. ವೈ. ಘೋರ್ಪಡೆ.—ಮಾನ್ಯ ಅಧ್ಯಕ್ಷರೇ, ನನಗಾದರೂ ಅನ್ನಿಸುತ್ತದೆ, ಆದಕ್ಕೆ ಇಂಗ್ಲೀಷ್‌ನಲ್ಲಿ ಉತ್ತರವನ್ನು ಕೊಟ್ಟರೆ ಬಹುಶಃ ಲಕ್ಕಪ್ಪನವರಿಗೆ ಸಂಪೂರ್ಣವಾಗಿ ಅರ್ಥವಾದೀತು ಎಂದು, ಆದರೂ ವಾಟಾಳ್ ನಾಗರಾಜ್‌ರವರು ಎದುರುಗಡೆ ಇರುವುದರಿಂದ ಕನ್ನಡದಲ್ಲಿ ಉತ್ತರವನ್ನು ಹೇಳುತ್ತೇನೆ. ಇದು ಮೂಲಭೂತವಾದಂಥ ಪ್ರಶ್ನೆಯಾಗಿದೆ. ನಾನು ಹೇಳಿದಂತೆ ಈ ಪಂಚಾಯತ್ ರಾಜ್ ಸಂಸ್ಥೆಗಳು ಇದು ಯಾವುದೇ ಒಂದು ಕಾರ್ಯಕ್ರಮವನ್ನು ಮಾಡಿದರೂ ದಕ್ಷತೆಯಿಂದ ಮಾಡಲಿಕ್ಕೆ ಸಾಧ್ಯವಿದೆ ಎಂಬುದೇ ನಮ್ಮಗಳ ವಿಶ್ವಾಸ. ಇದರಲ್ಲಿ ಹಣಕಾಸಿನ ಅಭಾವವೇನೂ ಇಲ್ಲ. ಇವೊತ್ತು ಕರ್ನಾಟಕದಲ್ಲಿ ೫೪೪ ಕೋಟಿ ರೂಪಾಯಿಗಳನ್ನು ಪಂಚಾಯತ್‌ರಾಜ್ ಸಂಸ್ಥೆಗೆ ಕೊಡುಶ್ತಿದ್ದೇವೆ. ಅದರಲ್ಲಿ ಮಂಡಲಪಂಚಾಯಿತಿಗೆ ೧೪೨ ಕೋಟಿ ರೂಪಾಯಿ, ಮತ್ತೆ ಮಂಡಲ–ತಿ ಅದಕ್ಕೆ ೧೦೦ ಕೋಟಿ ರೂಪಾಯಿ ಅಂದರೆ ೨೫೦ ಕೋಟಿ ರೂಪಾಯಿ ಹೆಚ್ಚುಕಡಿಮೆ ಮಂಡಲ ಪಂಚಾಯಿತಿಗೆ ನಾವು ಕೊಡುತ್ತಿದ್ದೇವೆ, ಜಿಲ್ಲಾ ಪರಿಷತ್ತಿಗೆ ಮೂರು ನೂರು ಕೋಟಿ ರೂಪಾಯಿಯನ್ನು ಕೊಡುತ್ತಿದ್ದೇವೆ. ಕೊಡುತ್ತಿದ್ದೇವೆ ಎಂದರೆ ಇದು ಸರ್ಕಾರದ ಹಣ, ಇದನ್ನು ನಾವು ಡೆಲಿಗೇಟ್ ಮಾಡುತ್ತಿದ್ದೇವೆ. ಆ ಕಾರಣದಿಂದಾಗಿ ಯಾವ ಕೆಲಸಕ್ಕೂ ಹಣಕಾಸಿನ ಅಭಾವದ ಪರಿಸ್ಥಿತಿ ಬರುವುದಿಲ್ಲ. ಇಲ್ಲಿ ತಮಗೊಂದು ಪ್ರಶ್ನೆಯನ್ನು ಕೇಳಬೇಕಾಗಿದೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಅವರು ಕೇಳಿದ್ದುದು ಅದಲ್ಲ. ಅವರಿಗೆ ಕಾರು ಇದೆ, ನಮಗಿಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ.—ನಾನು ತಮ್ಮಲ್ಲಿ ಕೇಳುವುದೇನೆಂದರೆ ಇದರಲ್ಲಿ.....

SRI K. LAKKAPPA.—We have no such status though we represent a wider area but these people have got the status of the Ministers. Why this anomaly? How do you account for this? What about the money involved in this because you are giving the status? Why such a waste of money and wasteful expenditure?

ಶ್ರೀ ಎಂ. ವೈ. ಘೋರ್ಪಡೆ.—ನಿಮಗೆ ಕೇಳಬೇಕಾದುದ್ದು ಏನೆಂದರೆ, ನೀವು ಅಧಿಕಾರದಲ್ಲಿದ್ದಾಗ ಕೋ–ಆಪರೇಟಿವ್ ಡಿಪಾರ್ಟ್‌ಮೆಂಟನ್ನು ಜಿಲ್ಲಾ ಪರಿಷತ್ತಿನಿಂದ ವಾಪಸ್ ತೆಗೆದುಕೊಂಡಿದ್ದೀರಿ, ನಾವು ಅಧಿಕಾರಕ್ಕೆ ಬರುವುದಕ್ಕೆ ಮುಂಚೆ. ನನ್ನ ದೃಷ್ಟಿಯಲ್ಲಿ ತಾವು ಯಾವ ಒಂದು ತಾತ್ವಿಕವಾದ ಸಿದ್ಧಾಂತಿಕವಾಗಿ ಯಾವ ಆಧಾರವೂ ಇಲ್ಲ. ಇವತ್ತು ಕೆಲವು ಬೇರೆ ಇಲಾಖೆಗಳನ್ನು ಕೂಡಾ ವಾಪಸ್ ನಾವು ಏತಕ್ಕೆ ತೆಗೆದುಕೊಳ್ಳಬಾರದು ಎಂಬ ವಿಚಾರ ನಡೆದಿದೆ. ನನಗನ್ನಿಸುತ್ತದೆ, ಇದು ಅಷ್ಟು ಹಗುರವಾದಂಥ ವಿಚಾರವಲ್ಲ. ಈ ಕೋ–ಆಪರೇಟಿವ್ ಡಿಪಾರ್ಟ್‌ಮೆಂಟನ್ನು ನೀವು ವಾಪಸ್ ತೆಗೆದು ಕೊಳ್ಳಬೇಕಾದುದು ಇರಲಿಲ್ಲ. There are two functions. First is promotional activities whether it is co-operation, education or any other subject. This is done by the Panchayatraj institutions. ಅಂದರೆ ನಡೆಸಬೇಕು. ಜನಸಂಪರ್ಕ ಇಲ್ಲದೇ ಅದನ್ನು ಬೆಳೆಸುವುದಕ್ಕೆ ಆಗುವುದಿಲ್ಲ. ಕೆಲವು ವಿಷಯಗಳು ರೆಗ್ಯುಲೇಟರಿ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಬಾರದು ಎನ್ನುವುದು ನಿಮ್ಮ ವಿಚಾರ ಇದ್ದರೆ ಅದನ್ನು ಸುಲಭವಾಗಿ ಅವರಿಗೆ ತಿಳಿಸಬಹುದು. ಆ ಪ್ರಕಾರವಾಗಿ ಗೈಡ್‌ಲೈನ್ಸ್ ಕೊಡಬಹುದು. ಉದಾಹರಣೆಗೆ ಎಜುಕೇಷನ್ ಇದೆ, ಎಜುಕೇಷನನ್ನು ಬೆಳೆಸಬೇಕು, ಜನ ಅದರಲ್ಲಿ ಆಸಕ್ತಿ ವಹಿಸಬೇಕು. ಶಾಲೆಗಳು ಸರಿಯಾಗಿ ಕೆಲಸವನ್ನು ಮಾಡುತ್ತಿಲ್ಲ ಎಂದು ನೋಡುವುದರಲ್ಲಿ ಜನ ಲಕ್ಷ್ಯ ಕೊಡಬೇಕು ಎಂದು ಇದರ ಉದ್ದೇಶ. ಇನ್ಸ್‌ಪೆಕ್ಷನ್‌ನ್ನು ವಾಡುವಾಗ ಹಸ್ತಕ್ಷೇಪ ಮಾಡಿ ಇಂಥ ಸ್ಕೂಲ್‌ಗಳಿಗೆ ಇನ್ಸ್‌ಪೆಕ್ಷನ್ ಮಾಡಿ ಇಂಥ ಶಾಲೆಗಳಿಗೆ ಇನ್ಸ್‌ಪೆಕ್ಷನ್ ಮಾಡಬೇಡಿ ಎಂದು ಹೇಳಿದರೆ ಜಿಲ್ಲಾ ಪರಿಷತ್ತಿನಲ್ಲಿ ಯಾವುದಕ್ಕೂ ಆ ರೀತಿ ಇಲ್ಲ. ಆ ಜಿಲ್ಲಾ ಪರಿಷತ್ತಿನಲ್ಲಿ ಆ ರೀತಿ ಏನಾದರೂ ಹೇಳುತ್ತಿದ್ದರೆ ಅದನ್ನು ಸರಿಪಡಿಸುವುದಕ್ಕೆ ಸಾಧ್ಯವಿದೆ. ಆ ರೀತಿ ಮೋಡಿದ ತಕ್ಷಣ ಎಜುಕೇಷನನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಹೊರಟರೆ ಮೂಲಭೂತವಾದ ವಿಚಾರಕ್ಕೆ ಪೆಟ್ಟು ಕೊಟ್ಟಂತಾಗೆ ಆಗುತ್ತದೆ. Sir, I personally think there are many defects because the Act is defective and there are no rules at all. Therefore, the defect is not in the concept but in the very haphazard manner in which the Act has been drafted. and not followed by rules Which make clear the intentions of the government

SRI K. LAKKAPPA.—Hon. Minister has conceded that there is defect in the act or the rules. Therefore, I would like to know as to whether because of these defects constraints and other things the ZPs are not able to take up the road works and irrigation works in the state so far as the major works are concerned which are entrusted to the Zilla Parishads. What action you are going to propose and see what streamlines you are going to bring in it ?

ಶ್ರೀ ಎಂ. ವೈ. ಘೋರ್ಪಡೆ.—ಜಿಲ್ಲಾ ಪರಿಷತ್ ಮಾಡಲಿಕ್ಕೆ ಆಗುತ್ತದೆ ಇಲ್ಲ ಎನ್ನುವ ಪ್ರಶ್ನೆ ಇಲ್ಲ. ಒಂದು ಜಿಲ್ಲಾ ಮಟ್ಟದಲ್ಲಿ ಯಾವ ಯಾವ ರಸ್ತೆಗಳನ್ನು ಎಕ್ಸಿಕ್ಯೂಟೀವ್ ಇಂಜಿನಿಯರ್ ಅವರು ರಿಪೇರಿ ಮಾಡಬೇಕು ಎಂದು ಹೇಳಿದ್ದಾರೆ. ಅಂತಹ ರಸ್ತೆಗಳನ್ನು ವರ್ಗಾವಣೆ ಮಾಡಿರುತ್ತೇವೆ.

(ಗೊಂದಲ)

MR. SPEAKER.—Order Order.....

ಶ್ರೀ ಕಾಗೋಡು ತಿಮ್ಮಪ್ಪ.—ದುಡ್ಡು ಇಲ್ಲ, ಸುಮ್ಮನೇ ಹೇಳುತ್ತಿದ್ದಾರೆ.

ಶ್ರೀ ಎಲ್. ಆರ್. ಶಿವರಾಮೆಗೌಡ.—ರಸ್ತೆ ಇಲ್ಲ, ಯಾವುದೂ ಇಲ್ಲ, ಸುಮ್ಮನೇ ಹೇಳುತ್ತಿದ್ದಾರೆ.....

(ಗೊಂದಲ)

MR. SPEAKER.—Order, Order.....

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ, ಇವೊತ್ತು ಜಿಲ್ಲಾ ಪರಿಷತ್‌ನಲ್ಲಿ ದುಡ್ಡು ಇಲ್ಲ, ಮಂಡಲ್ ಪಂಚಾಯತ್‌ನಲ್ಲೂ ಆವೇ ಪರಿಸ್ಥಿತಿ. ಇವರು ಕೊಡತಕ್ಕ ಗ್ರಾಂಟ್ ನಲ್ಲಿ ಕಿರಿ ಭಾಗ ಅಧಿಕಾರಿಗಳ ಸಂಬಳಕ್ಕೆ ಹೋಗುತ್ತಿದೆ..... .....

ಅಧ್ಯಕ್ಷರು.—ನಾನು ನಿಮ್ಮನ್ನು ಕರೆದಿಲ್ಲ...

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ಯಾವುದನ್ನಾದರೂ ಆಲ್ಲಿ ರಿವ್ಯೂ ಮಾಡಿದ್ದಾರೆಯೇ ?

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ಇದರಿಂದ ಏನೂ ಪ್ರಯೋಜನ ಆಗುವುದಿಲ್ಲ. ನಿಮ್ಮ ಕಾಳಜಿ ಊರ್ಜಿತವಾಗುವುದಿಲ್ಲ. ಆದ್ದರಿಂದ ಇದರ ಬಗ್ಗೆ ಪುನರ್ ಪರಿಶೀಲನೆ ಆಗಬೇಕು.....

SRI M. Y. GHORPADE.—Let me complete. The point is that if there is no money-whether it is ZP or the State Government there will no money, the question is for certain categories of roads. whatever there money in the budget which will be implemented there, is transferred there. ಅಲ್ಲಿ ಕಡಿಮೆ ದುಡ್ಡು ಇದೆ ಎಂದರೆ ಬಜೆಟ್‌ನಲ್ಲಿ ಕಡಿಮೆ ಇದೆ ಎಂದು ಆಗುತ್ತದೆ. ಅಲ್ಲಿ ಕೊಟ್ಟಿದ್ದೇವೆಂದು ಕಡಿಮೆ ಆಗಿಲ್ಲ.

(ಗೊಂದಲ)

ಬಜೆಟ್‌ನಲ್ಲಿ ಇಂತಹ ರಸ್ತೆಗಳಿಗೆ, ವಿಲೇಜ್ ರಸ್ತೆಗಳಿಗೆ ಸಾಕಷ್ಟು ಹಣ ಇಲ್ಲ ಎಂದರೆ ಅದು ಬೇರೆ ವಿಷಯ. ನಾವು ವಾದ ಮಾಡಬೇಕಾದಾಗ ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ಬರುತ್ತದೆ ಎಂದ ತಕ್ಷಣ ಹಣ ಇಲ್ಲವೆಂದು ಹೇಳುವ ವಾದ ಸರಿಯಲ್ಲವೆಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಕಾಗೋಡು ತಿಮ್ಮಪ್ಪನವರೇ...

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅಧ್ಯಕ್ಷರೇ...

ಅಧ್ಯಕ್ಷರು.—ನಾನು ನಿಮ್ಮನ್ನು ಕರೆದಿಲ್ಲ...

ಶ್ರೀ ಎಲ್. ಆರ್. ಶಿವರಾಮೇಗೌಡ.—ಜಿಲ್ಲಾ ಪರಿಷತ್ ಸದಸ್ಯರಾಗಿ ನಮಗೆ ಅನುಭವ ಇದೆ. ಆದ್ದರಿಂದ ಕೇಳಲಿಕ್ಕೆ ಬಿಡಿ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಮಂತ್ರಿಗಳು ಹೇಳಿದರು. ಬರೀ ಶಾಸಕರಿಗೆ ಹಿಂದೆ ಬಂದೂಕು ಕೊಡುತ್ತಿದ್ದೇವೆ ಎಂದು. ಈಗ ಜಿಲ್ಲಾ ಪರಿಷತ್‌ನವರ ಕೈಯಲ್ಲಿ ಬರೀ ಬಂದೂಕು ಇದ್ದಾವೆ. ಹಿಂದೆ ಶಾಸಕರ ಕೈಯಲ್ಲಿ ಬಂದೂಕು. ಗುಂಡು. ಕೇಪು ಇರುತ್ತಿತ್ತು ಕೇಪು, ಗುಂಡು ನೀವು ಇಟ್ಟು ಕೊಂಡಿದ್ದೀರಿ. ಬಂದೂಕು ಅವರಿಗೆ ಕೊಟ್ಟಿದ್ದೀರಿ. ಕಾರಣ ಏನು ಹೇಳುತ್ತಿದ್ದೀರಿ ಅಂದರೆ ನಾವು ಕೆರೆಗಳನ್ನು ರಸ್ತೆಗಳನ್ನು ನಿರ್ಮಿಸುವ ಕೆಲಸವನ್ನು ಅವರಿಗೆ ವಹಿಸಿಕೊಟ್ಟಿದ್ದೆವೆ ಎಂದು. ಮೇಜರ್ ಡಿಸ್ಟ್ರಿಕ್ಟ್, ಎಂ.ಡಿ.ಆರ್ ಮೇಲ್ಪಟ್ಟು ಏನು ಇದೆ, ಅವು ಮಾತ್ರ ರಾಜ್ಯ ಸರ್ಕಾರದ್ದು, ಉಳಿದುದೆಲ್ಲ ಅವರ ಕೈಯಲ್ಲಿ ಇವೆ. ಅವರಿಗೋಸ್ಕರ ಆನ್ಯೂಯಲ್ ರಿಪೇರಿಗೋಸ್ಕರ, ಸ್ಪೆಷಲ್ ರಿಪೇರಿಗೋಸ್ಕರ ಏನು ಹಣವನ್ನು ಕೊಡುತ್ತಿದ್ದೀರಿ, ಅಷ್ಟು ಪ್ರಮಾಣದಲ್ಲಿ ಕೊಡಬೇಕು. ಒಂದು ಕಿಲೋ ಮೀಟರ್ ರಸ್ತೆಗೆ ಇಷ್ಟು ಹಣ ಕೊಡಬೇಕೆಂದು ಇದೆ. ಅನ್ಯುಯಲ್ ರಿಪೇರಿಗೆ ಇಷ್ಟು, ಸ್ಪೆಷಲ್ ರಿಪೇರಿಗೆ ಇಷ್ಟು, ಡ್ರೈನ್ ಡ್ಯಾಮೇಜ್‌ಗೆ ಇಷ್ಟು ಎಂದು ಇದೆ. ಅದೇ ಪ್ರಕಾರ ಅಚ್ಚುಕಟ್ಟು ಪ್ರದೇಶದಲ್ಲಿ ಒಂದು ಎಕರೆಗೆ ಇಷ್ಟು ಹಣದಂತೆ ಒಂದೊಂದು ತಾಲ್ಲೂಕಿನಲ್ಲಿ ಎಷ್ಟು ಕೆರೆಗಳು, ಅಚ್ಚುಕಟ್ಟು ಪ್ರದೇಶಗಳು ಇವೆ ಲಂಪ್‌ಸಮ್ ಆಗಿ ಅಷ್ಟು ಪ್ರೊಪೋರ್ಷನೇಟ್ ಹಣವನ್ನು ರಾಜ್ಯ ಸರ್ಕಾರದವರು ಕೊಡುತ್ತಿಲ್ಲ. ಬದಲಾಗಿ ಎಲ್ಲೂ ಕೂಡ ಲಂಪ್‌ಸಮ್ ಹಣ ಕೊಟ್ಟಿಲ್ಲ. ಎರಡನೆಯದು ಪ್ರತಿವರ್ಷ ಹೊಸ ಕೆಲಸ, ಟ್ಯಾಂಕ್ ಇದರ ರೆಸ್ಟೋರೇಷನ್ ಮಾಡುವುದಕ್ಕೆ ಒರಿಜಿನಲ್ ವರ್ಕ್ಸ್‌ಗೆ ಅಥವಾ ರಸ್ತೆಗಳು ಇವೆ, ಬ್ರಿಜ್ ಕಟ್ಟುವುದಕ್ಕೆ ಅಥವಾ ಅದನ್ನು ಸ್ಪೆಷಲ್ ರಿಪೇರಿ ಮಾಡುವುದಕ್ಕೆ ಒರಿಜಿನಲ್ ವರ್ಕ್‌ಗೋಸ್ಕರ ನಾವು ವಿಶೇಷವಾಗಿ ಹಣವನ್ನು ಬಜೆಟ್‌ನಲ್ಲಿ ಏನು ಕೊಡುತ್ತಿದ್ದೇವೆ, ಆ ಹಣವನ್ನು ಇವೊತ್ತು ಜಿಲ್ಲಾ ಪರಿಷತ್‌ಗೆ ಕೊಡುತ್ತಿಲ್ಲ ಕಳೆದ ಮೂರುವರ್ಷ ವರ್ಷಗಳಿಂದ ಒಂದು ಜಿಲ್ಲಾ ಪರಿಷತ್ತಿನಲ್ಲಿಯೂ ಹೊಸ ವರ್ಕ್ಸನ್ನು ತೆಗೆದುಕೊಂಡಿಲ್ಲ. ಇದಕ್ಕೆ ಕಾರಣವೇನು ?

ಶ್ರೀ ಎಂ. ವೈ. ಘೋರ್ಪಡೆ.—ತಮಗೆ ಗೊತ್ತಿರುವಹಾಗೆ, ಯಾವ ಕಾಲಕ್ಕೂ ಎಂ.ಎಲ್.ಎ.ಗೆ ಒಂದು ಕಾಸು ಖರ್ಚು ಮಾಡುವಂಥ ಅಧಿಕಾರ ಇದ್ದಿಲ್ಲ. ಅವರು ಶಾಸನ ಸಭೆಗೆ ಬಂದು ಈ ಶಾಸನ ಸಭೆಯಲ್ಲಿ ಭಾಗವಹಿಸುವುದಕ್ಕೆ ಮಾತ್ರ ಹಕ್ಕಿದೆ ತಾಲ್ಲೂಕು ಪಟ್ಟದ ನಮ್ಮ ಶಾಸಕರಿಗೆ ನೇರವಾಗಿ ಖರ್ಚುಮಾಡತಕ್ಕಂಥ ಅಧಿಕಾರ ಯಾವ ಕಾಲಕ್ಕೂ ಇದ್ದಿಲ್ಲ. ಆ ಕಾಲಕ್ಕೆ ಏನು ರಸ್ತೆಗಳನ್ನು ಮಾಡುತ್ತಾ ಇದ್ದರು ಅದನ್ನು ಮಾಡಿಸಬೇಕಾದರೆ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗೆ ಹೇಳಿ ಮಾಡಿಸಬೇಕಾಗಿತ್ತು. ಈಗ ಏನಾದರೂ ಜಾಸ್ತಿ ರಸ್ತೆಗಳು ಬೇಕಂ, ಜಾಸ್ತಿ ಹಣ ಬೇಕು ಅಂದರೆ ಹಣಕಾಸಿನ ಮಂತ್ರಿಗಳಿಗೆ ಅವರು ಹೇಳಬಹುದು, ಬಜೆಟ್‌ನಲ್ಲಿ ಸೇರಿಸಬಹುದು. ಆದರೆ ಆ ಪ್ರಶ್ನೆಗೆ ಮತ್ತು ಈಗ ಏನು ಮಾತನಾಡುತ್ತಾ ಇದ್ದೇವೆ ಅದಕ್ಕೆ ಯಾವ ಸಂಬಂಧವಿಲ್ಲ ಎಂದು ಹೇಳುತ್ತಾ ಇದ್ದೇನೆ.

(ಗೊಂದಲ)

SRI KAGODU THIMMAPPA —Unless you make out a case how can the Finonce Minister give it ?

ಅಧ್ಯಕ್ಷರು.—ಡಾಕ್ಟರ್ ಚೌಧರಿಯವರೆ, ಜಿಲ್ಲಾ ಪರಿಷತ್ತುಗಳ ಕಾನ್ಸೆಪ್ಟ್, ಅದರ ವರ್ಕಿಂಗ್ ಇವೆಲ್ಲ ನಾನು ಈಗಾಗಲೇ ಸದನದಲ್ಲಿ ತಿಳಿಸಿದ್ದೇನೆ. ಅದರ ಬೇಡಿಕೆ ಮೇಲೆ ಎರಡು ದಿವಸ ಅಲ್ಲಲ್ಲಿ ಮೂರು ದಿವಸ ಚರ್ಚೆ ಮಾಡೋಣ, ಏನೂ ತೊಂದರೆಯಿಲ್ಲ.

ಡಾ. ಆರ್. ಬಿ. ಚೌಧರಿ.—ಮಾನ್ಯ ಅಧ್ಯಕ್ಷರೆ, ನಾನು ನಾಲ್ಕು ಪ್ರಶ್ನೆಗಳನ್ನು ಕೇಳಿದ್ದೆ. ಮೂರಕ್ಕೆ ಉತ್ತರ ದೊರೆತಿದೆ, ಇನ್ನೊಂದು ಪ್ರಶ್ನೆ ಬಿಟ್ಟು ಹೋಗಿದೆ.

ವಿಜಾಪುರ ಜಿಲ್ಲೆಯಂ ಸರ್ಕಾರಿ ಆಸ್ಪತ್ರೆ ಬಗ್ಗೆ

೬೩೧ ಡಾ. ಆರ್. ಬಿ. ಚೌಧರಿ (ಸಿಂಧಗಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ವಿಜಾಪುರ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಿಗೆ ಹಾಗೂ ಆರೋಗ್ಯ ಕೇಂದ್ರಗಳಿಗೆ ಸರಬರಾಜು ಮಾಡಲಾದ ಔಷಧಿಗಳ ಗುಣಮಟ್ಟ ಕಳಪೆಯಾಗಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಔಷಧಿಗಳು ಜಿಲ್ಲಾ ಪರಿಷತ್ ನಿಂದ ವಿತರಣೆ ಮಾಡಲಾಗುವುದೇ? ಅಥವಾ ಆರೋಗ್ಯ ಇಲಾಖೆಯಿಂದ ಮಾಡಲಾಗುವುದೇ ?

ಇ) ಜಿಲ್ಲೆಯ ಆರೋಗ್ಯ ಸಿಬ್ಬಂದಿ ಇಲಾಖೆಯ ಅಧೀನದಲ್ಲಿ ದುಡಿಯುತ್ತಿದೆಯೋ ಅಥವಾ ಜಿಲ್ಲಾ ಪರಿಷತ್ ಅಧೀನದಲ್ಲಿ ದುಡಿಯುತ್ತಿದೆಯೋ ?